ಕರ್ನಾಟಕ ಸರ್ಕಾರ

Phone : 08532-227077
Faxe : 08532-229012
email : dudc_rcr@yahoo.co.in

# ಜಿಲ್ಲಾಧಿಕಾರಿಗಳ ಕಾರ್ಯಾಲಯ
## (ಜಿಲ್ಲಾ ನಗರಾಭಿವೃದ್ಧಿ ಕೋಶ)
ರಾಯಚೂರು ಜಿಲ್ಲೆ, ರಾಯಚೂರು.

File No: O/O PD-12012/85 & 87 /2016-PD(UD)_RAICHUR ದಿನಾಂಕ:28.10.2016

## ಅಧಿಸೂಚನೆ

ವಿಷಯ: ರಾಯಚೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಅಕೌಂಟೆಂಟ ಹಾಗೂ ಜೂನಿಯರ್ ಪ್ರೋಗ್ರಾಮರಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಕುರಿತು.

ಉಲ್ಲೇಖ: ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ ಪೌನಿ/ಎಂ. ಆರ್. ಸಿ/ಸಿಆರ್-14/2012-13 ದಿ :03/08/2016

~***~

ಪೌರಸುಧಾರಣಾ ಯೋಜನೆಯಡಿ (MRC) ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಉಲ್ಲೇಖಿತ ಪತ್ರದಲ್ಲಿ ನಿರ್ದೇಶಿಸಿರುವಂತೆ, ರಾಯಚೂರು ಜಿಲ್ಲೆಯಲ್ಲಿ ಹೊಸದಾಗಿ ಮೇಲ್ದರ್ಜೆಗೇರಿಸಿದ ಪಟ್ಟಣ ಪಂಚಾಯತಿ ಹಾಗೂ ಪುರಸಭೆಗಳಿಗೆ ಜೂನಿಯರ್ ಪ್ರೋಗ್ರಾಮರಗಳನ್ನು ಮತ್ತು ನಗರಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಅಕೌಂಟೆಂಟಗಳನ್ನು ಗುತ್ತಿಗೆ ಆಧಾರದ ಮೆಲೆ ಖಾಯಂ ಸಿಬ್ಬಂದಿ ನೇಮಕವಾಗುವವರೆಗೂ ಅಥವಾ ಒಂದು ವರ್ಷದವರೆಗೂ ಇವುಗಳಲ್ಲಿ ಯಾವುದು ಮೊದಲು ಅಲ್ಲಿಯವರೆಗೂ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗಳ ವಿವರ

| ಕ್ರ. ಸಂ | ಹುದ್ದೆಗಳ ವಿವರ | ಒಟ್ಟು ಹುದ್ದೆಗಳು |
|---|---|---|
| 01 | ಜೂನಿಯರ್ ಪ್ರೋಗ್ರಾಮರ್ | 05 |
| 02 | ಅಕೌಂಟೆಂಟ್ಸ್ | 08 |

| ಕ್ರ. ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಜೂನಿಯರ್ ಪ್ರೋಗ್ರಾಮರ್ | ಅಕೌಂಟೆಂಟ್ಸ್ |
|---|---|---|---|
| 01 | ನಗರಸಭೆ, ರಾಯಚೂರು | - | 01 |
| 02 | ಪುರಸಭೆ, ದೇವದುರ್ಗ | - | 01 |
| 03 | ಪುರಸಭೆ, ಲಿಂಗಸೂಗೂರು | - | 01 |
| 04 | ಪುರಸಭೆ, ಮಸ್ಕಿ | 01 | 01 |
| 05 | ಪಟ್ಟಣ ಪಂಚಾಯತಿ, ಸಿರವಾರ | 01 | 01 |
| 06 | ಪಟ್ಟಣ ಪಂಚಾಯತಿ, ಬಳಗಾನೂರು | 01 | 01 |
| 07 | ಪಟ್ಟಣ ಪಂಚಾಯತಿ, ಕವಿತಾಳ | 01 | 01 |
| 08 | ಪಟ್ಟಣ ಪಂಚಾಯತಿ, ತುರುವಿಹಾಳ | 01 | 01 |
| | ಒಟ್ಟು | 05 | 08 |

1. ಅಭ್ಯರ್ಥಿಗಳ ಆಯ್ಕೆಯನ್ನು ಮೆರಿಟ್, ಸಂದರ್ಶನ ಮತ್ತು ಪ್ರಾಯೋಗಿಕ ಪರೀಕ್ಷೆಯ ಮೂಲಕ ಮೀಸಲಾತಿ ನಿಯಮಗಳ ಅನುಸಾರ ಪ್ರಕಟಿಸಲಾದ ಜಿಲ್ಲಾವಾರು ಖಾಲಿ ಹುದ್ದೆಗಳಿಗೆ ಅನುಗುಣವಾಗಿ ಆಯ್ಕೆ ಮಾಡಲಾಗುತ್ತದೆ.
   1. ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭಿಕ ದಿನಾಂಕ 02/11/2016
   2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 14/11/2016
2. ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು **ದಿನಾಂಕ 14/11/2016 ಸಂಜೆ 5.30 ಗಂಟೆಯೊಳಗಾಗಿ** ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು ಇಲ್ಲಿಗೆ ಮುದ್ದಾಂ ಸಲ್ಲಿಸತಕ್ಕದ್ದು, ಅವಧಿ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
3. ಅರ್ಹತಾ ಷರತ್ತುಗಳು

II. ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಅತಂಕವನ್ನುಂಟುಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

III. ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಈ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ

4. <u>ಶೈಕ್ಷಣಿ ವಿದ್ಯಾರ್ಹತೆ</u>

I. ಅಕೌಂಟೆಂಟ್ ಹುದ್ದೆಗೆ

i. ಬಿ. ಕಾಂ. ಪದವಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರ ಬೇಕು (ಪ್ರಥಮ ದರ್ಜೆಯಲ್ಲಿ ಲಭ್ಯವಿಲ್ಲದ ಸಂಧರ್ಭದಲ್ಲಿ ದ್ವಿತೀಯ ದರ್ಜೆಯಲ್ಲಿ ಪಾಸಾಗಿರುವವರನ್ನು ಪರಿಗಣಿಸಲಾಗುವುದು)

ii. ಕಂಪ್ಯೂಟರ್ ಸಾಕ್ಷರತೆ ಉಳ್ಳವರಾಗಿರಬೇಕು

iii. Tally ಯಲ್ಲಿ ಕೆಲಸ ಮಾಡಿದ ಅನುಭವವಿರಬೇಕು

II. ಜೂನಿಯರ್ ಪ್ರೋಗ್ರಾಮರ್

i. ಡಿಪ್ಲಮೋ ಇನ್ ಕಂಪ್ಯೂಟರ್ ಸೈನ್ಸ್ (From the Board of Technical Education) /ಬಿ. ಎಸ್. ಸಿ(ಸಿ. ಎಸ್)/ ಬಿ. ಸಿ. ಎ / ಎಂ. ಎಸ್. ಸಿ. (ಸಿ. ಎಸ್) ರಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು

5. <u>ವೇತನ ಶ್ರೇಣಿ</u>

I. ಅಕೌಂಟೆಂಟ್ ಹುದ್ದೆಗೆ ಮಾಸಿಕ ಕನ್ಸಲ್ಟೆನ್ಸಿ ಫೀ ರೂ 8,000/-

II. ಜೂನಿಯರ್ ಪ್ರೋಗ್ರಾಮರ್ ಹುದ್ದೆಗೆ ಮಾಸಿಕ ಕನ್ಸಲ್ಟೆನ್ಸ್ಇ ಫೀ ರೂ 9,937/-

6. <u>ವಯೋಮಿತಿ : ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು:</u>

I. ಕನಿಷ್ಠ 18 ವರ್ಷ; ಗರಿಷ್ಠ ವಯೋಮಿತಿ 40 ವರ್ಷಗಳು

ಅಭ್ಯರ್ಥಿಗಳ ಜನ್ಮ ದಿನಾಂಕವನ್ನು ಅವರ ಎಸ್. ಎಸ್. ಎಲ್. ಸಿ. ಅಥವಾ ತತ್ಸಮಾನ ವಿದ್ಯಾರ್ಹತೆ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣ ಪತ್ರ (ಟಿ. ಸಿ), ಕ್ಯುಮುಲೇಟಿವ್ ರೆಕಾರ್ಡ್ಸನಲ್ಲಿರುವಂತೆ ಪರಿಗಣಿಸಲಾಗುವುದು ಇವುಗಳನ್ನು ಹೊರತುಪಡಿಸಿ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

7. <u>ಷರತ್ತುಗಳು</u>

I. ಅಭ್ಯರ್ಥಿಗಳ ನೇಮಕಾತಿ ಸಂಪೂರ್ಣ ಗುತ್ತಿಗೆ ಆಧಾರವಾಗಿದ್ದು, ಅರ್ಹತೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು

II. ಹುದ್ದೆಗಳು ಒಂದು ವರ್ಷದ ಅವಧಿ ಅಥವಾ ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಆಗುವವರೆಗೂ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇರುತ್ತದೆ.

III. ಗುತ್ತಿಗೆಯ ಅವಧಿಯು ಒಂದು ವರ್ಷದ ಅವಧಿಯದಾಗಿದ್ದು, ಅವಶ್ಯಕತೆ ಅನುಗುಣವಾಗಿ ಅಭ್ಯರ್ಥಿಗಳತೃಪ್ತಿಕರ ಸೇವೆ ಆಧರಿಸಿ, ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯೊಡನೆ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಬಹುದಾಗಿರುತ್ತದೆ, ಆದರೆ ಯಾವುದೇ ಕಾರಣಕ್ಕೂ ಖಾಯಂಗೊಳಿಸಲಾಗುವುದಿಲ್ಲ.

IV. ಮೀಸಲಾತಿಗೆ ಸಂಬಂಧಿಸಿದಂತೆ ಹಾಗೂ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ಲಗತ್ತಿಸದೇ ಸಲ್ಲಿಸಿದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು

V. ಅನುಭವವಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು

VI. ಜ್ಯೂನಿಯರ್ ಪ್ರೋಗ್ರಾಮರ್ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿಯು ನಡೆಸುವ ಅರ್ಹತಾ / ಮೆರಿಟ್ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ (75% weightage) ಹಾಗೂ ವಿದ್ಯಾರ್ಹತೆಯಲ್ಲಿ ಪಡೆದ ಅಂಕ (25% Weightage) ಮೆರಿಟ್ ಪಟ್ಟಿಯ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ಘೋಷಿಸಲಾಗುವುದು.

ಜಿಲ್ಲಾಧಿಕಾರಿಗಳು
ರಾಯಚೂರು